ತರಳಬಾಳು ರೂರಲ್ ಡೆವಲಪ್‌ಮೆಂಟ್ ಫೌಂಡೇಶನ್, ಸಿರಿಗೆರೆ.

## ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ.
## ಭಾರತೀಯ ಕೃಷಿ ಅನುಸಂಧಾನ ಪರಿಷತ್, ನವದೆಹಲಿ.

# ಬಾಳೆ ಬೆಳೆಯ ನಾಟಿ ಕ್ರಮಗಳು




ಲೇಖಕರು

ಶ್ರೀ ಬಸವನಗೌಡ ಎಂ. ಜಿ.
ತೋಟಗಾರಿಕೆ ತಜ್ಞರು

ಡಾ|| ದೇವರಾಜ ಟಿ. ಎನ್.
ಕಾರ್ಯಕ್ರಮ ಸಂಯೋಜಕರು



ತರಳಬಾಳು ಕೃಷಿ ವಿಜ್ಞಾನ ಕೇಂದ್ರ
ದಾವಣಗೆರೆ

## ಬಾಳೆ ಬೇಸಾಯದ ವಿವಿಧ ನಾಟಿ ಕ್ರಮಗಳು :

ಬಾಳೆ ಬೆಳೆ ಆಹಾರ ಮತ್ತು ಆದಾಯದ ದೃಷ್ಟಿಯಿಂದ ಅಂತರ್ ರಾಷ್ಟ್ರೀಯ ಪ್ರಾಮುಖ್ಯತೆ ಪಡೆದ ಬೆಳೆ. ಇದು ಅಭಿವೃದ್ಧಿ ಹೊಂದುತ್ತಿರುವ ನಮ್ಮ ಭಾರತ ದೇಶದಲ್ಲಿ ಮಿಲಿಯನ್ ಗಟ್ಟಲೆ ನಮ್ಮ ರೈತರಿಗೆ ಆದಾಯದ ಭದ್ರತೆ ನೀಡುತ್ತಿರುವುದು ಸಂತಸದ ಸಂಗತಿ. ಇದರ ಉತ್ಪಾದಕತೆ ಹೆಚ್ಚಿಸುವ ದೃಷ್ಟಿಯಲ್ಲಿ ಆವಶ್ಯಕ ಸಂಶೋಧನೆಗಳು ನಡೆಯುತ್ತವೆ. ಇವುಗಳಲ್ಲಿ ಪೋಷಕಾಂಶಗಳ ನಿರ್ವಹಣೆ, ಹನಿನೀರಾವರಿ, ರಸಾವರಿ, ಉತ್ತಮ ತಳಿಗಳ ಬಳಕೆ, ಹೀಗೆ ಹಲವಾರು ವಿಷಯಗಳಲ್ಲಿ ಸಂಶೋಧನೆ ನಡೆಯುತ್ತಿದೆ. ಇವುಗಳಂತೆಯೇ ಬಾಳೆಯ ನಾಟಿ ಕ್ರಮದಲ್ಲೂ ಸಹ ಹೊಸ ಹೊಸ ಅವಿಷ್ಕಾರಗಳನ್ನು ಕಂಡಿದ್ದೇವೆ.

## ನಾಟಿ ಸಾಮಾಗ್ರಿಗಳು :

ಬಾಳೆಯನ್ನು ಅದರ ಬುಡದಲ್ಲಿ ಬರುವ ಗಡ್ಡೆಯಿಂದ ಮೂಡುವ ಮೊಳಕೆಗಳು ಸ್ವಲ್ಪ ಮಟ್ಟಿಗೆ ಗಡುಸುತನಕ್ಕೆ ಪರಿವರ್ತನೆಯಾದ ತರುವಾಯ ಅದನ್ನು ಮೂಲ ಗಡ್ಡೆಯಿಂದ ಮೊಳಕೆ ಗಡ್ಡೆ ಮತ್ತು ಸ್ವಲ್ಪ ಬೇರುಗಳು ಇರುವಂತೆಯೇ ಪ್ರತ್ಯೇಕಿಸಿ ಹೊಸ ಜಾಗದಲ್ಲಿ ನಾಟಿ ಮಾಡುವುದು ಬಾಳೆಯ ಸಾಂಪ್ರಾದಾಯಕ ಪರಂಪರಾಗತ ನಾಟಿ ಕ್ರಮ. ಆದರೆ ಹೆಚ್ಚು ಪ್ರಮಾಣದಲ್ಲಿ ಬಾಳೆ ಗಿಡ ಬೆಳಸಿ. ಒಂದೇ ಸಮಯದಲ್ಲಿ ಗೊನೆ ಕೊಯ್ಲು ಮಾಡಬೇಕೆಂದರೆ ಅಂಗಾಂಶ ಕಸಿ ಗಿಡ ಉತ್ತಮ. ಅದು ನೀವು ಬೆಳಸಿದಂತೆ ಬೆಳೆಯುತ್ತದೆ. ನಿಮ್ಮ ಇಚ್ಚೆಯಂತೆ ಫಲ ನೀಡುತ್ತದೆ ಎಂಬುದು ವಿಜ್ಞಾನದ ಶೋಧನೆ.

## ಕಂದಿನಲ್ಲಿ ನಾಟಿ ಮಾಡುವಾಗ 2 ವಿಧದ ಕಂದುಗಳನ್ನು ನೋಡುತ್ತೇವೆ.

1. **ಕತ್ತಿ ಕಂದು :** ಈ ಕಂದುಗಳು ಚೂಪಾಗಿ ಬಂದು ಬುಡದಿಂದಲೇ ಬಲಿಷ್ಠವಾಗಿರುತ್ತದೆ. ಇದರಲ್ಲಿ ಮೊಳಕೆ ಗಡ್ಡೆಯ ಪ್ರಮಾಣ ಜಾಸ್ತಿ ಇರುತ್ತದೆ. ಉತ್ತಮ ಫಸಲನ್ನು ಕೊಡುವ ಗುಣ ಇದಕ್ಕಿರುತ್ತದೆ. ಯಾವಾಗಲೂ ನಾಟಿಗೆ ಕತ್ತಿ ಕಂದುಗಳನ್ನು ಬಳಸಿದರೆ ಉತ್ತಮ.

**2. ನೀರ್ಕಂದು :** ಈ ಕಂದುಗಳು ಬುಡದಿಂದಲೇ ಎಲೆ ಬಿಟ್ಟಿರುತ್ತವೆ. ಎಲೆಗಳು ತುಂಬಾ ಅಗಲವಾಗಿರುತ್ತವೆ. ಮೊಳಕೆ ಕೊಡುವ ಪ್ರಮಾಣ ಕಡಿಮೆಯಿರುತ್ತದೆ. ಸಾಧಾರಣ ಫಸಲನ್ನು ಕೊಡುವ ಗುಣ ಇರುತ್ತದೆ.

## ಕಂದುಗಳ ಉಪಚಾರ :

ಕಂದುಗಳನ್ನು ನಾಟಿ ಮಾಡುವಾಗ ಅದರ ಬೆಳವಣಿಗೆಯ ಭಾಗವನ್ನು ಪೂರ್ಣ ಕತ್ತರಿಸಿ ಕೇವಲ ಗಡ್ಡೆಯೊಂದರನ್ನೇ ಉಳಿಸಿಕೊಂಡು ಅದನ್ನು ಪೂರ್ತಿಯಾಗಿ ಬೇರುಗಳು ಹಾಗೂ ಗಡ್ಡೆ ಭಾಗದಲ್ಲಿ ಗಾಯಗಳು ಹಾಗೂ ಹುಳುಗಳು ತಿಂದಂತವುಗಳಿದ್ದರೆ ಅವುಗಳನ್ನೆಲ್ಲಾ ಕೆತ್ತಿ ತೆಗೆದು ಉಪಚಾರಕ್ಕೆ ಸಿದ್ಧ ಪಡಿಸಿಕೊಳ್ಳಬೇಕು.

ಉಪಚಾರಕ್ಕೆ ಕಾರ್ಬಂಡೈಯಜಿಮ್ 2.0 ಗ್ರಾಂ ಹಾಗೂ ಕ್ಲೋರ್‌ಫೈರಿಫಾಸ್ 2.0 ಮಿ.ಲೀ. ಒಂದು ಲೀಟರ್ ನೀರಿಗೆ ಬೆರಸಬೇಕು. ಉತ್ತಮ ಫಲಿತಾಂಶಕ್ಕೆ 200 ಲೀಟರ್‌ನ ಒಂದು ಬ್ಯಾರೆಲ್‌ನಲ್ಲಿ ಉಪಚಾರ ಮಾಡಬೇಕು. ಕಂದುಗಳನ್ನು ಸುಮಾರು 20-30 ನಿಮಿಷಗಳವರೆಗೆ ದ್ರಾವಣದಲ್ಲಿ ನೆನೆಸಬೇಕು. ನಂತರ ಅವುಗಳನ್ನು ನೆರಳಿನಲ್ಲಿ ಒಣಗಿಸಿ ನಾಟಿಗೆ ಬಳಸಬೇಕು. ಸಾಂಪ್ರದಾಯಕವಾಗಿ ರೈತರು ಸಗಣಿ ರಾಡಿಯಲ್ಲಿ ಕಂದುಗಳನ್ನು ಅದ್ದಿ ನಂತರ ಅದಕ್ಕೆ ಪೋರೇಟ್ ಹರಳುಗಳನ್ನು ಚಿಮುಕಿಸಿ ನಾಟಿ ಮಾಡುತ್ತಾರೆ.

ಸಾವಯವ ಉಪಚಾರಕ್ಕೆ ಟ್ರೈಕೋಡರ್ಮಾ, ರಂಜಕ ಕರಗಿಸುವ ಬ್ಯಾಕ್ಟೀರಿಯಾ, ಅಜೋಸ್ಪೈರಿಲಂಗಳನ್ನು ಬಳಸಬಹುದು.

## ಬಾಳೆ ಬೆಳೆಸುವ ಸೂಕ್ತ ಕಾಲ :

ಬಾಳೆ ನಾಟಿಗೆ ಮಳೆಗಾಲವೇ ಸೂಕ್ತ ಎಂದು ಎಲ್ಲಾ ರೈತರು ನಂಬಿದ್ದಾರೆ. ಉತ್ತಮ ಫಸಲನ್ನು ಪಡೆಯಲು ವರ್ಷವಿಡೀ ಬಾಳೆಯನ್ನು ನಾಟಿ ಮಾಡಬಹುದು. ಆದರೆ ಚಳಿಗಾಲದ ಡಿಸೆಂಬರ್ ತಿಂಗಳು ನಾಟಿಗೆ ಸೂಕ್ತವಲ್ಲ.

ನಮ್ಮ ರೈತರು ಮಾಡುವ ವಿಧಾನವೆಂದರೆ ಮುಂಗಾರು ಮಳೆ ಪ್ರಾರಂಭವಾಗುವ ಸಮಯದಲ್ಲಿ ಅಥವಾ ಮಳೆಗಾಲ ಮುಗಿಯುವ ಸಮಯದಲ್ಲಿ ನಾಟಿ ಮಾಡುವುದು. ಈ ಸಮಯದಲ್ಲಿ ನಾಟಿ ಮಾಡುವುದರಿಂದ ಬಾಳೆಗೆ 3-4 ತಿಂಗಳು ನೀರು ಬೇಕಾಗುವುದಿಲ್ಲ. ಮಳೆ ಸಾಕಷ್ಟು ಇರುವುದರಿಂದ ಗೊಬ್ಬರವೊಂದನ್ನಷ್ಟೇ ನೀಡುತ್ತಿದ್ದರೆ ಸಾಕು ಬಾಳೆ ಚೆನ್ನಾಗಿ ಬೇರು ಇಳಿಸಿಕೊಂಡು ಬೆಳೆಯುತ್ತದೆ.

## ನಾಟಿ ಮಾಡಲು ಭೂಮಿ ಸಿದ್ಧತೆ :

ಬಾಳೆ ನಾಟಿ ಮಾಡಬೇಕೆಂದಿರುವ ಪ್ರದೇಶವನ್ನು 2-3 ಬಾರಿ ಚೆನ್ನಾಗಿ ಉಳುಮೆ ಮಾಡಿ, ಕಸ ಕಡ್ಡಿಗಳನ್ನು ಆರಿಸಿ ತೆಗೆದು ಭೂಮಿಯನ್ನು ಹದ ಮಾಡಿಕೊಳ್ಳಬೇಕು. ನಂತರ ತಳಿಗಳಿಗನುಗುಣವಾಗಿ ಶಿಫಾರಸ್ಸು ಮಾಡಿದ ಅಂತರದಲ್ಲಿ 0.5 ಘನ ಮೀಟರ್ ಇರುವ ಗುಣಿಗಳನ್ನು ತೆಗೆಯಬೇಕು. ಈ ಗುಣಿಗಳಿಗೆ ಸಮಪ್ರಮಾಣದಲ್ಲಿ ಬೆರೆಸಿದ ಕೊಟ್ಟಿಗೆ ಗೊಬ್ಬರ, ಕಾಂಪೋಸ್ಟ್ ಮತ್ತು ಮೇಲ್ಮಣ್ಣಿನ ಮಿಶ್ರಣವನ್ನು ಹಾಕಿ ತುಂಬಬೇಕು. ನಾಟಿ ಮಾಡಲು ಕತ್ತಿ ಕಂದುಗಳನ್ನು ಬಳಸುವುದು ಸೂಕ್ತ.

ಇತ್ತೀಚಿನ ದಿನಗಳಲ್ಲಿ ಟ್ರ್ಯಾಕ್ಟರ್ ಚಾಲಿತ ಗುಂಡಿ ತಗೆಯುವ ಸಾಧನ ಬಳಕೆಯಲ್ಲಿದ್ದು, ಉತ್ತಮ ಗುಣಮಟ್ಟದ ಗುಂಡಿಗಳನ್ನು ತೆಗೆಯಲು ಸಹಕಾರಿಯಾಗುತ್ತದೆ. ಇದರಿಂದ ಕೂಲಿ ಆಳುಗಳ ಮೇಲಿನ ಅವಲಂಬನೆಯನ್ನೂ ಸಹ ಕಡಿಮೆಗೊಳಿಸಿದಂತಾಗುತ್ತದೆ. ಇನ್ನೂ ಕೆಲವು ರೈತರು ಟ್ರ್ಯಾಕ್ಟರ್ ಚಾಲಿತ ನೇಗಿಲುಗಳಿಂದ ಆಳವಾಗಿ ಉಳುವು ಮಾಡಿ ಅದರಲ್ಲಿ ಕಂದುಗಳನ್ನು ನಾಟಿ ಮಾಡುವುದು ರೂಢಿಯಿದೆ.

## ನಾಟಿ ಮಾಡಲು ಅಂತರ :

ಸಾಧಾರಣವಾಗಿ ಪಚ್ಚಬಾಳೆ ತಳಿಗಳಾದ ರೋಬಸ್ಟಾ, ಕ್ಯಾವೆಂಡಿಶ್, ಗ್ರಾಂಡ್ ನೈನ್ (G9) ಇವುಗಳನ್ನು ಹತ್ತಿರ ನಾಟಿ ಮಾಡಬಹುದು. (1.8 X 1.8 ಮೀ.) ಇತರೆ ತಳಿಗಳಿಗೆ ಸ್ವಲ್ಪ ಹೆಚ್ಚು ಅಂತರ ಬೇಕು.

**ಮಣ್ಣು ಪರೀಕ್ಷೆ ಮಾಡಿಸಿ,**
**ರಸಗೊಬ್ಬರ ಉಳಿಸಿ.**

| | ತಳಿಗಳು | ಅಂತರ | ಗುಣಿಗಳ ಸಂಖ್ಯೆ (ಪ್ರತಿ ಹೆಕ್ಟೇರಿಗೆ) |
|---|---|---|---|
| 1. | ಕ್ಯಾವೆಂಡಿಷ್ (ಪಚ್ಚಬಾಳೆ) | 1.8 X 1.8 ಮೀ. | 3000 |
| 2. | ರೋಬಸ್ಟ್ | i) 2.2 ಮೀ. X 1.8 ಮೀ. | 2250 |
| | | ii) 1.5 ಮೀ. X 1.5 ಮೀ. | 4444 |
| 3. | ಏಲಕ್ಕಿ ಬಾಳೆ | 2.1 ಮೀ. X 2.1 ಮೀ. | 2260 |
| 4. | ಜೋಡಿ ಸಾಲು ಪದ್ಧತಿ | 1.2 X 1.2 X 2.0 ಮೀ. | 5200 |
| 5. | ಪ್ರತಿ ಗುಣಿಗೆ 2 ಕಂದು | 1.8 X 3.6 ಮೀ. | 3200 |
| 6. | ಪ್ರತಿ ಗುಣಿಗೆ 3 ಕಂದು | 1.8 X 3.6 ಮೀ. | 4800 |

## ನಾಟಿ ಮಾಡುವುದು :


ಬಾಳೆ ನಾಟಿ ಮಾಡುವ ಪ್ರದೇಶವನ್ನು 2–3 ಬಾರಿ ಚೆನ್ನಾಗಿ ಉಳುಮೆ ಮಾಡಬೇಕು. ಉಳುಮೆಯ ನಂತರ ಹೊಲದಲ್ಲಿರುವ ಹೆಂಟೆಗಳನ್ನು ಒಡೆದು ಪುಡಿಮಾಡಿ, ಕಸ – ಕಡ್ಡಿಗಳನ್ನು ಆರಿಸಿ ತೆಗೆದು ಭೂಮಿಯನ್ನು ಹದ ಮಾಡಿಕೊಳ್ಳಬೇಕು. ನಂತರ ತಳಿಗಳಿಗನುಸಾರವಾಗಿ ಶಿಫಾರಸ್ಸು ಮಾಡಿದ ಅಂತರದಲ್ಲಿ 0.5 ಘನ ಮೀಟರ್ ಇರುವ ಗುಣಿಗಳನ್ನು ತೆಗೆಯಬೇಕು. ಈ ಗುಣಿಗಳಿಗೆ ಸಮಪ್ರಮಾಣದಲ್ಲಿ ಬೆರೆಸಿದ ಕೊಟ್ಟಿಗೆ ಗೊಬ್ಬರ, ಕಾಂಪೋಸ್ಟ್ ಮತ್ತು ಮೇಲ್ಮಣ್ಣಿನ ಮಿಶ್ರಣವನ್ನು ಹಾಕಿ ತುಂಬಬೇಕು. ಕಂದುಗಳನ್ನು ನಾಟಿ ಮಾಡುವುದಾದರೆ ಕತ್ತಿನ ಕಂದುಗಳನ್ನೇ ಬಳಸುವುದು ಉತ್ತಮ. ಬಂಚಿಟಾಪ್ ಮತ್ತು ನಂಜುರೋಗ ಮುಕ್ತ ತಾಯಿಗಿಡದಿಂದ ಕಂದುಗಳನ್ನು ಆಯ್ಕೆ ಮಾಡಬೇಕು. ನಾಟಿ ಮಾಡಿದ ಕೂಡಲೇ ನೀರು ಉಣಿಸಬೇಕು. ನಂತರ ಮಣ್ಣು ಮತ್ತು ಹವಾಗುಣಕ್ಕನುಸಾರವಾಗಿ ಪ್ರತಿ 8–10 ದಿವಸಗಳಗೊಮ್ಮೆ ನೀರು ಹಾಯಿಸಬೇಕು.

**ತರಳಬಾಳು 'ಬಾಳೆ ಸ್ಪೆಷಲ್' ಬಳಸಿ,**
**ಬಾಳೆಯಲ್ಲಿ ಇಳುವರಿ ಹೆಚ್ಚಿಸಿ**


**2.7x2.7 ಮೀ. ನಾಟಿ**



**1.2x1.2x2.0 ಮೀ. ಜೋಡಿ ಸಾಲು ಪದ್ಧತಿ**



**1.8x1.8 ಮೀ. ನಾಟಿ ಪದ್ಧತಿ**



## ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ


## ಕಾರ್ಯಕ್ರಮ ಸಂಯೋಜಕರು

## ತರಳಬಾಳು ಕೃಷಿ ವಿಜ್ಞಾನ ಕೇಂದ್ರ

ಕದಳೀವನ, ಎಲ್.ಐ.ಸಿ. ಕಾಲೋನಿ ಲೇಔಟ್

ಬಿ.ಐ.ಇ.ಟಿ. ರಸ್ತೆ, ದಾವಣಗೆರೆ-577 004.

ದೂರವಾಣಿ : 08192-263462, ಫ್ಯಾಕ್ಸ್ : 08192-260969

ಮಿಂಚಂಚೆ : dvgtkvk@yahoo.com

ವೆಬ್‌ಸೈಟ್ : www.taralabalukvk.com